ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017-18 ದಿನಾಂಕ: 22-5-2017

# ಪತ್ರಿಕಾ ಆಮಂತ್ರಣ

1. "ಸಾಮಾಜಿಕ ನ್ಯಾಯ ಮತ್ತು ಡಾ: ಬಿ.ಆರ್. ಅಂಬೇಡ್ಕರ್" ರಾಜ್ಯಮಟ್ಟದ ವಿಚಾರ ಸಂಕಿರಣ:

ಉದ್ಘಾಟನೆ:

ಸಿದ್ಧರಾಮಯ್ಯ,
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಧ್ಯಕ್ಷತೆ:

ಹೆಚ್. ಆಂಜನೇಯ,
ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮುಖ್ಯ ಭಾಷಣಕಾರರು:
ಬೌದ್ಧ ಧರ್ಮಗುರು ದಲೈ ಲಾಮ,
ನೋಬೆಲ್ ಶಾಂತಿ ಪುರಸ್ಕೃತರು

ದಿನಾಂಕ: 23–5–2017, ಮಂಗಳವಾರ, ಸಮಯ: ಬೆಳಿಗ್ಗೆ 10–00

ಸ್ಥಳ: ಡಾ: ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು–52

ವಿಶೇಷ ಸೂಚನೆ: ಈ ಕಾರ್ಯಕ್ರಮಕ್ಕೆ ತೆರಳಲು ಪ್ರವೇಶ ಪತ್ರಗಳಿಗಾಗಿ ಮಾನ್ಯತೆ ಪಡೆದ ರಾಜ್ಯ ಮಟ್ಟದ ಮತ್ತು ರಾಷ್ಟ್ರಮಟ್ಟದ ಮಾಧ್ಯಮ ಸಂಸ್ಥೆಗಳ ಪ್ರತಿನಿಧಿಗಳು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕೆ ವಿಭಾಗದ ಶ್ರೀಮತಿ ಪೂರ್ಣಿಮಾ ಅಥವಾ ಜಡಿಯಪ್ಪ ಗೆದ್ಲಗಟ್ಟಿ – 7892055996 ಇವರಿಂದ ಇಂದು ಸಂಜೆ 6:30 ಗಂಟೆಯೊಳಗೆ ಮತ್ತು ನಾಳೆ (23–05–2017) ಬೆಳಿಗ್ಗೆ 8:00 ರಿಂದ 9:30 ಗಂಟೆಯೊಳಗೆ ಪಡೆದುಕೊಳ್ಳಲು ಕೋರಿದೆ.

2. ರಾಷ್ಟ್ರೀಯ ಮಟ್ಟದ "ಕೃಷಿ ಅರಣ್ಯ ಕಾರ್ಯಾಗಾರ"

ಮುಖ್ಯ ಅತಿಥಿ:

ಡಾ: ಜವೇದ್ ರಿಜ್ವಿ,
ಜಾಗತಿಕ ಕೃಷಿ ಅರಣ್ಯ ಯೋಜನೆ ದಕ್ಷಿಣ ಏಷ್ಯಾ ಪ್ರಾಂತದ ನಿರ್ದೇಶಕರು, ನವದೆಹಲಿ

ಡಾ: ಓ. ಪಿ. ಚತುರ್ವೇದಿ,

ನಿರ್ದೇಶಕರು, ಕೇಂದ್ರೀಯ ಕೃಷಿ ಅರಣ್ಯ ಸಂಶೋಧನಾ ಸಂಸ್ಥೆ, ಝಾನ್ಸಿ

ದಿನಾಂಕ: 23–05–2017 ಮಂಗಳವಾರ ಬೆಳಿಗ್ಗೆ 10–30 ಗಂಟೆಗೆ

ಸ್ಥಳ: ಅಂತರ ರಾಷ್ಟ್ರೀಯ ಸಮಾವೇಶ ಭವನದ ಸೆಮಿನಾರ್ ಹಾಲ್ –2.
. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಜಿಕೆವಿಕೆ ಆವರಣ, ಬೆಂಗಳೂರು

ವಿ. ಸೂ.: ಈ ಕಾರ್ಯಕ್ರಮಕ್ಕೆ ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ವಾಹನ ಅಂದು ಬೆಳಿಗ್ಗೆ 9–45 ಗಂಟೆಗೆ ಹೊರಡಲಿದೆ.

3. ಅಂಬೇಡ್ಕರ್ ಜ್ಞಾನದರ್ಶನ ಅಭಿಯಾನ ಅಂಬೇಡ್ಕರ್ ಚಿಂತನಗಳ ಪ್ರವೇಶಿಕೆಯ ವಿಚಾರ ಸಂಕೀರ್ಣ

ಉದ್ಘಾಟನೆ:
ಪ್ರೊ. ಎಂ. ಮುನಿರಾಜು,
ಕುಲಪತಿಗಳು.
ಬೆಂಗಳೂರು ವಿಶ್ವವಿದ್ಯಾಲಯ,

ವಿಶೇಷ ಆಹ್ವಾನಿತರು:
ಪ್ರೊ. ಎಸ್. ಜಾಫೆಟ್,
ವಿಶೇಷಾಧಿಕಾರಿಗಳು, ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾಲಯ

ದಿನಾಂಕ: 23–5–2017 ಮಂಗಳವಾರ ಬೆಳಿಗ್ಗೆ 10–30 ಗಂಟೆಗೆ
ಸ್ಥಳ: ಸೆಮಿನಾರ್ ಹಾಲ್ , ಯು.ವಿ.ಸಿ.ಇ. ಬೆಂಗಳೂರು –1

# ಪತ್ರಿಕಾ ಪ್ರಕಟಣೆ

# ಕೆಳವರ್ಗದ ಮಹಿಳೆಯರಿಗೆ ಸರ್ಕಾರಿ ಸೌಲಭ್ಯಗಳು ದೊರಕುವಂತಾಗಬೇಕು

ಬೆಂಗಳೂರು, ಮೇ 22, (ಕರ್ನಾಟಕ ವಾರ್ತೆ)

ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳು ಸವಲತ್ತುಗಳು ಕೆಳವರ್ಗದ ಮಹಿಳೆಯರಿಗೆ ದೊರಕುವಂತಾಗಬೇಕೆಂದು ಮೇಯರ್ ಜಿ. ಪದ್ಮಾವತಿ ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಸಂಯುಕ್ತ ಆಶ್ರಯದಲ್ಲಿ ಇಂದು ಕಾಸಿಯಾ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಮಹಿಳಾ ಉದ್ಯಮಿಗಳೊಡಣೆ ರಾಜ್ಯಮಟ್ಟದ ಸಂವಾದ ಕಾರ್ಯಕ್ರಮದಲ್ಲಿ ಪರಿಷ್ಕೃತ ಬಡ್ಡಿ ಸಹಾಯಧನ ಯೋಜನೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಕೆಳವರ್ಗದ ಮಹಿಳೆಯರಿಗೆ ಇಲಾಖೆಯಲ್ಲಿ ಸಿಗುವ ಸೌಲಭ್ಯಗಳ ಮಾಹಿತಿಯೇ ಇರುವುದಿಲ್ಲ. ಶ್ರೀಮಂತರು ಬಲಿಷ್ಠರೇ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾರೆ. ಇದರಿಂದ ಕೆಳವರ್ಗದ ಮಹಿಳೆಯರು ಆರ್ಥಿಕವಾಗಿ ಮೇಲೆ ಬರಲು ಸಾಧ್ಯವಾಗುವುದಿಲ್ಲ. ಅಲ್ಲದೆ ಸಾಲ ಪಡೆಯಲು ಬಯಸುವ ಕೆಳವರ್ಗದ ಮಹಿಳೆಯರಿಗೆ ದಾಖಲೆಗಳನ್ನು ಒದಗಿಸುವುದು ಕಷ್ಟವಾಗುತ್ತದೆ. ಆದ್ದರಿಂದ ಸಾಲ ನೀಡುವ ಸಂದರ್ಭದಲ್ಲಿ ನೀಡಬೇಕಾಗುವ ದಾಖಲೆಗಳಲ್ಲಿ ಅವರಿಗೆ ವಿನಾಯಿತಿಯನ್ನು ನೀಡಬೇಕು. ಆಗ ಮಾತ್ರ ಮಹಿಳೆಯರನ್ನು ಸ್ವಾವಲಂಬಿಗಳಾಗಿ ಮಾಡುವ ಮೂಲಕ ಅವರು ಸ್ವಾಭಿಮಾನಿಗಳಾಗಿ ಬದುಕುವಂತೆ ಮಾಡಬಹುದು ಎಂದರು.

ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಭಾರತಿ ಶಂಕರ್ ಅವರು ಮಾತನಾಡಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ನಮ್ಮ ಸರ್ಕಾರವು ಸಹಾಯಧನ ಯೋಜನೆಯನ್ನು ಕೆ.ಎಸ್.ಎಫ್.ಸಿ. ಸಹಯೋಗದೊಂದಿಗೆ ಅನುಷ್ಠಾನಗೊಳಿಸುತ್ತಿದೆ. ನಿಗಮದ ವತಿಯಿಂದ ಇದುವರೆವಿಗೆ 419 ಮಹಿಳಾ ಉದ್ದಿಮೆದಾರಿಗೆ ಸಹಾಯಧನ ಯೋಜನೆಯಡಿ ಬಡ್ಡಿ ಸಹಾಯಧನ ಸೌಲಭ್ಯವನ್ನು ಒದಗಿಸಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಕನಿಷ್ಠ 5 ಲಕ್ಷ ರೂ.ಗಳಿಂದ 50 ಲಕ್ಷ ರೂ.ಗಳವರೆಗಿನ ಸಾಲದ ಮೊತ್ತಕ್ಕೆ ನಿಗಮದಿಂದ ಶೇ. 10 ಬಡ್ಡಿ ಸಹಾಯಧನವನ್ನು ನೀಡಲಾಗುತ್ತಿದೆ. 2017-18 ನೇ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಲು ಸಾಲ ಮಿತಿಯನ್ನು 50 ಲಕ್ಷ ರೂ.ಗಳಿಂದ 2 ಕೋಟಿ ರೂ.ಗಳಿಗೆ ಹೆಚ್ಚಿಸಿದೆ. ಇದರಿಂದ ಮಹಿಳೆಯನ್ನು ದೊಡ್ಡಮಟ್ಟದ ಉದ್ಯಮವನ್ನು ನಡೆಸಲು ನೆರವಾಗಲಿದೆ ಎಂದರು.

ಈಗಾಗಲೇ ಉದ್ಯಮವನ್ನು ನಡೆಸುತ್ತಿರುವ ಮತ್ತು ಉದ್ಯಮ ನಡೆಸಲು ಬಯಸುವ ಮಹಿಳೆಯರು ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ಅನುಮಾನಗಳನ್ನು ಬಗೆಹರಿಸಿಕೊಂಡರು.

ಕಾರ್ಯಕ್ರಮದಲ್ಲಿ ಕಾಸಿಯಾದ ಅಧ್ಯಕ್ಷರಾದ ಎ. ಪದ್ಮನಾಭ, ಉಪಾಧ್ಯಕ್ಷ, ಆರ್. ಹನುಮಂತೇಗೌಡ, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕರಾದ ಬಿ.ಎಚ್. ಶ್ರೀನಿವಾಸಮೂರ್ತಿ ಅವರು ಸೇರಿದಂತೆ ಮತ್ತಿತರ ಗಣ್ಯ ವ್ಯಕ್ತಿಗಳು ಉಪಸ್ಥಿತರಿದ್ದರು.

## ರಫ್ತು ನಿರ್ವಹಣಾ ತರಬೇತಿ

ಬೆಂಗಳೂರು, ಮೇ 22, (ಕರ್ನಾಟಕ ವಾರ್ತೆ)

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ 6 ದಿನಗಳ 88 ನೇ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಜೂನ್ 19 ರಿಂದ 24 ರವರೆಗೆ ಬೆಂಗಳೂರಿನ ಕೇಂದ್ರ ಕಛೇರಿಯಲ್ಲಿ ಆಯೋಜಿಸಲು ಉದ್ದೇಶಿಸಿದೆ.

ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳು/ ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿ.ಟಿ.ಪಿ.ಸಿ. ಕಛೇರಿಯಲ್ಲಿ ನೋಂದಣಿಯನ್ನು ಮಾಡಿಸತಕ್ಕದ್ದು ತರಬೇತಿ ಸ್ಥಳ: ವಿ.ಟಿ.ಪಿ.ಸಿ. ಟ್ರೈನಿಂಗ್ ಹಾಲ್, ಬಿ.ಎಂ.ಟಿ.ಸಿ. ಕಟ್ಟಡ, ಎ. ಬ್ಲಾಕ್, 3 ನೇ ಮಹಡಿ, ಕೆ.ಹೆಚ್. ರಸ್ತ, ಶಾಂತಿನಗರ, ಬೆಂಗಳೂರು. ಹೆಚ್ಚಿನ ವಿವರಗಳಿಗಾಗಿ ಸಿ.ಎಸ್. ಭಾಸ್ಕರ್, ವಿ.ಟಿ.ಪಿ.ಸಿ. ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಕೈಗಾರಿಕಾ ಉತ್ತೇಜನ ಕೇಂದ್ರ, ಬಿ.ಎಂ.ಟಿ.ಸಿ. ಕಟ್ಟಡ, ಎ, ಬ್ಲಾಕ್, 3 ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು –27 ದೂರವಾಣೀ: 080–22534444/22210644 ಫ್ಯಾಕ್ಸ್ 22210655 ಇಮೇಲ್ vtckarnataka@gmail.com ವೆಬ್‌ಸೈಟ್ www.vtpckarantaka.gov.in ನ್ನು ಸಂಪರ್ಕಿಸಲು ಪ್ರಕಟಣೆ ತಿಳಿಸಿದೆ.

## ರೇಷ್ಮೆ ನೂಲು ಬಿಚ್ಚಣಿಕೆಯಲ್ಲಿ ಉದ್ಯಮಶೀಲತಾ ತರಬೇತಿಗಾಗಿ ಅರ್ಜಿ

ಬೆಂಗಳೂರು, ಮೇ 22, (ಕರ್ನಾಟಕ ವಾರ್ತೆ)

ರೇಷ್ಮೆ ನೂಲು ಬಿಚ್ಚಾಣಿಕೆಯಲ್ಲಿ ಕೌಶಲ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ಕೇಂದ್ರ ರೇಷ್ಮೆ ಮಂಡಳಿಯು ಆಯೋಜಿಸುವ ಉದ್ಯಮಶೀಲತಾ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಒಂದು ತಿಂಗಳ ಅವಧಿಗೆ  ಗ್ರಾಮೀಣ ಪ್ರದೇಶದ ಡಿಪ್ಲೋಮಾದಾರರಿಗೆ ತರಬೇತಿ ಆರ್ಥಿಕ ನೆರವು ಒದಗಿಸಲು ಉದ್ದೇಶಿಸಿದೆ.

ತರಬೇತಿಯು 4 ವಾರಗಳ ಅವಧಿಯದ್ದಾಗಿದ್ದು, ಪ್ರಾಯೋಗಿಕ ಹಾಗೂ ಉದ್ಯಮಶೀಲತಾ ಅಂಶಗಳನ್ನೊಳಗೊಂಡಿದ್ದು ಕೇಂದ್ರ ರೇಷ್ಮೆ ತಾಂತ್ರಿಕತೆ ಮತ್ತು ಸಂಶೋಧನಾ ಸಂಸ್ಥೆ, ಮಡಿವಾಳ, ಬೆಂಗಳೂರು ಇಲ್ಲಿ ನಡೆಸಲಾಗುವುದು.

ತರಬೇತಿಗೆ ಅರ್ಜಿ ಸಲ್ಲಿಸುವವರು ಕನಿಷ್ಠ ಡಿಪ್ಲೋಮ ಪಡೆದಿರಬೇಕು.  ತರಬೇತಿಯು ಉಚಿತವಾಗಿದ್ದು, ತರಬೇತಿ ಅವಧಿಯಲ್ಲಿ ಉಚಿತ ಊಟ ಮತ್ತು ವಸತಿ ವ್ಯವಸ್ಥೆ ಒದಗಿಸಲಾಗುವುದು.  ತರಬೇತಿ ಅವಧಿಯಲ್ಲಿ ಕಡ್ಡಾಯವಾಗಿ ತರಬೇತಿ ಸಂಸ್ಥೆಯಲ್ಲಿಯೇ ತಂಗಿರಬೇಕು.  ತರಬೇತಿ ಪಡೆದ ನಂತರ ಶಿಕ್ಷಣಾರ್ಥಿಗಳು ಸ್ವಂತವಾಗಿ ರೀಲಿಂಗ್ ಉದ್ದಿಮೆ ಪ್ರಾರಂಭಿಸಬಹುದು ಹಾಗೂ ಇಲಾಖೆಯಿಂದ ಸ್ಥಾಪಿತವಾಗುವ ರೀಲಿಂಗ್ ಪಾರ್ಕ್‍ಗಳಲ್ಲಿ ಸ್ವಂತ ಉದ್ದಿಮೆ ಪ್ರಾರಂಭಿಸಲು ಆದ್ಯತೆ ನೀಡಲಾಗುವುದು.

ತರಬೇತಿಗೆ ಹಾಜರಾಗಲು ಇಚ್ಛಿಸುವವರು ಆಯಾ ಜಿಲ್ಲೆಯ ರೇಷ್ಮೇ ಉಪ ನಿರ್ದೇಶಕರನ್ನು ಸಂಪರ್ಕಿಸಿ ಅರ್ಜಿ ನಮೂನೆ ಮತ್ತು ಮಾಹಿತಿ  ಪಡೆಯುವುದು ಅಥವಾ ಇಲಾಖೆ ವೆಬ್‍ಸೈಟ್: **http://www.silk.kar.nic.in** ಅಥವಾ **http://www.karnataka.gov.in/sericulture** ನಲ್ಲಿ ಅರ್ಜಿ ನಮೂನೆ ಮತ್ತು ಮಾಹಿತಿಗಳನ್ನು ಡೌನ್‍ಲೋಡ್ ಮಾಡಿಕೊಳ್ಳುವುದು.  ಹೆಚ್ಚಿನ ಮಾಹಿತಿಗೆ ಸಹಾಯವಾಣಿ **9900881100** ಅನ್ನು ಸಂಪರ್ಕಿಸುವುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **31–5–2017**.

## Application Invited

**Bangalore, 22 (Karnataka Information)**

**Online Applications for ARIVU-2 Education Loan for CET students for the academic year 2017-18 are being accepted from 5-4-2017.  Eligible candidates may submit their application in the prescribed format online from KMDC website www.kmdc.kar.nic.in/arivu2.  A printout of the application along with copies of certificates/documents should be mandatorily**

**submitted to the District Manager, KMDC Where the student resides. The last date for submission of online applications is 1st June 2017 says a press release issued by The Karnataka Minorities Development Corporation Limited.**